**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.145/2020

**PW**. 2

**CW**. 7

**ಸಾಕ್ಷಿಯ ಹೆಸರು –ಸನಾವುಲ್ಲಾ**

**ತಂದೆಯ ಹೆಸರು –ಸಿದ್ದಯ್ಯ**

**ವಯಸ್ಸು –64 ವರ್ಷಗಳು** ದಿನಾಂಕ 10–12–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಆಟೋ ಚಾಲಕ**

**ವಾಸಸ್ಥಳ –ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಈಗ್ಗೆ 6 ವರ್ಷಗಳ ಹಿಂದೆ ಒಂದು ದಿನ ಹುಣಸೂರು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ಅಪರಿಚಿತ ಗಂಡಸಿನ ಶವ ಇದ್ದು , ಅದು ಅಸಹಜ ಸಾವು ಎಂದು, ಪೊಲೀಸರು ನಮ್ಮ ಸಮಕ್ಷಮ ಮಧ್ಯಾಹ್ನ 2.15 ರಿಂದ 3.30 ರವರೆಗೆ ಶವ ಪಂಚನಾಮೆ ಮಾಡಿ, ನಮ್ಮ ಸಹಿ ಪಡೆದಿರುತ್ತಾರೆ. ಸದರಿ ಶವ ಪಂಚನಾಮೆಯನ್ನು ದೃಢಿಕೃತ ನಕಲನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ–8 ಹಾಗೂ 9 ರವರು ಸಹ ಇದ್ದು, ಸದರಿ ಪಂಚನಾಮೆಗೆ ಸಹಿ ಮಾಡಿದ್ದಾರೆ. ಸದರಿ ಶವ ಕೊಳೆತ ಸ್ಥಿತಿಯಲ್ಲಿದ್ದು , ಗುರುತು ಹಚ್ಚಲು ಸಾಧ್ಯವಾಗುತ್ತಿರಲಿಲ್ಲ , ಮುಖ ಹಾಗೂ ಕೈಕಾಲುಗಳಿಗೆ ಹುಳು ಬಿದ್ದಿದ್ದವು.

**SC No.145/2020**
**PW.2**

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ನಿಪಿ–2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ . ಪೊಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿದ್ದಾನೆ ಎಂದರೆ ಸರಿ . ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.